ಮುಂಬೈ ಆಗಿದೆ. ಇದರ ಈಗಿನ ಪ್ರತಿನಿತ್ಯದ ವಹಿವಾಟು ಸುಮಾರು ರೂ. 75 ರಿಂದ 80 ಲಕ್ಷಗಳಷ್ಟಿದೆ.

ಆ) ಅನಧಿಕೃತವಾಗಿ ಯಾವ ಕಂಪನಿಯವರು ಆನ್‌ಲೈನ್ ಲಾಟರಿ ನಡೆಸುತ್ತಿಲ್ಲ, ಕೇಂದ್ರ ಸರ್ಕಾರದ ಲಾಟರಿ ರೆಗ್ಯುಲೇಷನ್ ಕಾಯಿದೆ 1998 ರನ್ವಯ ಕರ್ನಾಟಕ ರಾಜ್ಯವು "ಲಾಟರಿ ಮುಖ್ಯ ವಲಯ" ವಲ್ಲದ ಕಾರಣ ಹೊರರಾಜ್ಯದ ಲಾಟರಿ ಕಂಪನಿಗಳು ನಮ್ಮ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ನಡೆಸುತ್ತಾರೆ ಇವರ ಪ್ರತಿನಿತ್ಯದ ವಹಿವಾಟಿನ ಮಾಹಿತಿ ಲಭ್ಯವಿರುವುದಿಲ್ಲ.

ಇ) ಕರ್ನಾಟಕ ರಾಜ್ಯ ಸರ್ಕಾರವು ಗಣಕೀಕೃತ ನೆಟ್‌ವರ್ಕ್ ಲಾಟರಿ ಪ್ರಾರಂಭಿಸುವ ಮುನ್ನ ಮಾರುಕಟ್ಟೆ ಏಜೆಂಟರೊಂದಿಗೆ 5 ವರ್ಷಗಳ ಒಪ್ಪಂದ ಮಾಡಿಕೊಂಡು ಪರವಾನಗಿ ನೀಡಿದೆ. ಆನ್‌ಲೈನ್ ಲಾಟರಿ ನಿಷೇದ ಕುರಿತಂತೆ ಪ್ರತಿಭಟನೆ ಚಳುವಳಿಗಳು ಸರ್ಕಾರದ ಗಮನಕ್ಕೆ ಬಂದಿದ್ದು ಈ ಕುರಿತು ಕೂಲಂಕುಶ ಪರಿಶೀಲನೆ ನಡೆಯುತ್ತಿದೆ.

ಬಿ.ಡಿ.ಎ ಯಿಂದ ಭೂಸ್ವಾಧೀನತೆಯಿಂದ ಕೈ ಬಿಟ್ಟಿರುವ ಪ್ರಕರಣಗಳ ಬಗ್ಗೆ

77 (303) : ಶ್ರೀ ಸಿಂಧ್ಯಾ ಪಿ.ಜಿ.ಆರ್. (ಕನಕಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನತೆಯನ್ನು ಕೈ ಬಿಟ್ಟಿರುವ ಪ್ರಕರಣ ಸಂಖ್ಯೆ ಎಷ್ಟು;

ಆ) ಈ ಪ್ರಕರಣಗಳ ಭೂಸ್ವಾಧೀನತೆಯನ್ನು ಕೈ ಬಿಡಲು ಕಾರಣಗಳೇನು; ವಿವರಗಳನ್ನು ನೀಡುವುದು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) 2001ನೇ ಏಪ್ರಿಲ್ ನಿಂದ 16 ಪ್ರಕರಣಗಳು

ಆ) ಭೂಸ್ವಾಧೀನತೆಯಿಂದ ಕೈ ಬಿಡಲಾದ ಒಟ್ಟು 180 ಎಕರೆ 16 ಗುಂಟೆ ಜಮೀನಿನಲ್ಲಿ 111 ಎಕರೆ 09 ಗುಂಟೆ ಜಮೀನಿನ ವಿಸ್ತೀರ್ಣವನ್ನು ಹೊರ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಭೂಸ್ವಾಧೀನದಿಂದ ಹೊರತುಪಡಿಸಲಾಗಿದೆ. 10 ಎಕರೆ 18 ಗುಂಟೆ ವಿಸ್ತೀರ್ಣದ ಜಮೀನನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಪರವಾಗಿ ಸಮಾನಾಂತರ ಅಧಿಸೂಚನೆ ಮಾಡಿದ್ದರಿಂದ ಮತ್ತು ಉಳಿಕೆ 58 ಎಕರೆ 29 ಗುಂಟೆ ಜಮೀನು ಅನಧಿಕೃತ ಕಟ್ಟಡಗಳಿಂದ ಆವೃತ್ತಗೊಂಡಿದ್ದ ಕಾರಣದಿಂದ ಭೂಸ್ವಾಧೀನ ಅಧಿಸೂಚನೆಯಿಂದ ಹೊರತುಪಡಿಸಲಾಗಿದೆ.

ಕರ್ನಾಟಕದಲ್ಲಿ ಖಾಲಿ ಇರುವ ಉಪಲೋಕಾಯುಕ್ತ ಹುದ್ದೆಯ ಭರ್ತಿಯ ಬಗ್ಗೆ

80 (295) : ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಾಯುಕ್ತದಲ್ಲಿ ಮಾನ್ಯ ಉಪ ಲೋಕಾಯುಕ್ತರ ಹುದ್ದೆ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ತುಂಬದಿರಲು ಕಾರಣಗಳೇನು ವಿವರಗಳನ್ನು ನೀಡುವುದು;

ಇ) ಮಾನ್ಯ ಉಪಲೋಕಾಯುಕ್ತರ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಮತ್ತು ಇ) ಮಾನ್ಯ ಉಪಲೋಕಾಯುಕ್ತರ ಹುದ್ದೆಯನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಭ್ರಷ್ಟ ಅಧಿಕಾರಿಗಳ ಮೇಲೆ ನಡೆಸಿರುವ ಲೋಕಾಯುಕ್ತರ ದಾಳಿಯ ವಿವರದ ಬಗ್ಗೆ

82 (299) : ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಾಯುಕ್ತ ಕಾಯಿದೆ ಮತ್ತು ಭ್ರಷ್ಟಾಚಾರ ನಿರ್ಮೂಲನೆ ತಡೆ ಕಾಯಿದೆಯಡಿಯಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಐ.ಎ.ಎಸ್. ಐ.ಪಿ.ಎಸ್ ಹಾಗೂ ಕೆ.ಎ.ಎಸ್. ನ ಎಷ್ಟು ಅಧಿಕಾರಿಗಳ ಮನೆ ಹಾಗೂ ಕಛೇರಿ ಮೇಲೆ ದಾಳಿ ಮಾಡಲಾಗಿದೆ; ವಿವರಗಳನ್ನು ನೀಡುವುದು;

ಆ) ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ವರದಿಯನ್ನು ಕರ್ನಾಟಕ ಲೋಕಾಯುಕ್ತರು ಸರ್ಕಾರಕ್ಕೆ ಸಲ್ಲಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದಾರೆ.

ಇ) ಎಷ್ಟು ಪ್ರಕರಣದಲ್ಲಿ ಬಿ ರಿಪೋರ್ಟ್‌ನ್ನು ಸಲ್ಲಿಸಲಾಗಿದೆ; ವಿವರಗಳನ್ನು ನೀಡುವುದು;

ಈ) ಎಷ್ಟು ಪ್ರಕರಣಗಳು ಈ ಎರಡೂ ಕಾಯಿದೆಯಡಿಯಲ್ಲಿ ಲೋಕಾಯುಕ್ತ ವ್ಯಾಪ್ತಿಯಲ್ಲಿ ಬಾಕಿ ಉಳಿದಿದೆ;

ಉ) ಈ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಪಡಿಸಲು ಲೋಕಾಯುಕ್ತಕ್ಕೆ ಕಾಲಮಿತಿಯನ್ನು ವಿಧಿಸಿದೆಯೇ;

ಊ) ಎಷ್ಟು ಲೋಕಾಯುಕ್ತ ಶಿಫಾರಸ್ಸು ಸರ್ಕಾರದ ಮಟ್ಟದಲ್ಲಿ ಬಾಕಿ ಇವೆ;

ಋ) ಸರ್ಕಾರವು ಈ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕಾಲಮಿತಿಯನ್ನು ವಿಧಿಸಿದೆಯೇ; ಹಾಗಿದ್ದಲ್ಲಿ ಎಷ್ಟು ದಿನದಲ್ಲಿ ಇತ್ಯರ್ಥ ಪಡಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ)

ಪಿ.ಸಿ. ಕಾಯ್ದೆ	ಕ.ಲೋ. ಕಾಯ್ದೆ ಶೋಧನಾ ವಾರೆಂಟ್
ಐ.ಎ.ಎಸ್–2	1
ಐ.ಪಿ.ಎಸ್–ಇಲ್ಲ	ಇಲ್ಲ
ಐ.ಎಫ್.ಎಸ್–1	ಇಲ್ಲ
ಕೆ.ಎ.ಎಸ್–7	ಇಲ್ಲ

(ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಐ.ಎ.ಎಸ್– 1

ಐ.ಪಿ.ಎಸ್– ಇಲ್ಲ

ಐ.ಎಫ್.ಎಸ್– ಇಲ್ಲ